ಚಿಂತಾಮಣಿ ಕೊಡ್ಲೆಕೆರೆ
ಕಲೆ: ಡಿ.ಕೆ. ರಮೇಶ್

# ಭರತದ ಮಧ್ಯಾಹ್ನ

ಆ ಬೇಸಿಗೆ ರಜೆಯಲ್ಲಿ ಕೇಶಪ್ಪಚ್ಚಿ ನಮಗೆಲ್ಲ ತುಂಬ ಬೇಕಾದ ಗೆಳೆಯನಾಗಿಬಿಟ್ಟ! ಅವನಿಗೆ ಹಿಂದುಗಡೆಯಿಂದ ಕೇಶಮಳ್ಳ ಎಂದು ಕರೆಯುತ್ತಿದ್ದರು. ಅಘನಾಶಿನಿಯ ನಮ್ಮ ಅಜ್ಜಿಮನೆಯಲ್ಲಿ ಈ ಸಲ ಅವನೊಬ್ಬ ಅನಿರೀಕ್ಷಿತ ಬಂಧು. ಬಂದವನನ್ನು ನಮ್ಮ ಅಜ್ಜ ಪ್ರೀತಿಯಿಂದಲೇ ಕೂರಿಸಿಕೊಂಡು ಮಾತನಾಡಿದರು. ಅವನು ಬಂದಾಗ ಮಧ್ಯಾಹ್ನ ಹನ್ನೆರಡರ ಹೊತ್ತು. ಸುಡುಬಿಸಿಲು. ಗೋಕರ್ಣದಿಂದ ತದಡಿವರೆಗೆ ಗುಡ್ಡದ ಹಾದಿಯಲ್ಲಿ ನಡೆದು ಬಂದವನು ತಾರಿ ದಾಟಲೂ ಹಣ ಕೊಡಲಿಲ್ಲವಂತೆ. ಅಂಬಿಗರ ಮಾಚನಿಗಿಂತಲೂ ಹೆಚ್ಚಾಗಿ ತಾನೇ ಹುಟ್ಟು ಹಿಡಿದು ದೋಣಿ ನಡೆಸುವ ಕೆಲಸಕ್ಕೆ ಮುಂದಾದ ಈ ಭಟ್ಟರನ್ನು ಸುಮ್ಮನೆ ಒಂದೆಡೆ ಕೂರಿಸಲು ಆತನಿಗೆ ಸಾಕುಬೇಕಾಯಿತಂತೆ. ಸಭಾಹಿತರ ಮನೆಗೆ ಹೋಗುವವನೆಂದು ಹೇಳಿದ್ದರಿಂದ ದೋಣಿಯವರು ಇವನ ಉಪದ್ವ್ಯಾಪಗಳನ್ನು ತಡೆದುಕೊಂಡರು. ಇವೆಲ್ಲ ನಮಗೆ ಸಂಜೆ ಹೊತ್ತಿಗೆ ಮಾಚನಿಂದ ತಿಳಿಯಿತು. ಈ ಒಟ್ಟೂ ಕೀಟಲೆಯಿಂದ ಕೇಶಪ್ಪಚ್ಚಿ ದೋಣಿ ದಾಟಲು ಕೊಡಬೇಕಾದ ಎಂಟಾಣೆ ಉಳಿಸಿದ್ದ. ಗೋಕರ್ಣದಿಂದ ಅಘನಾಶಿನಿಗೆ ಪುಕ್ಕಟೆ ಬಂದು ಮುಟ್ಟಿದ್ದನ್ನು ಅವನು ಮತ್ತೆ ಮತ್ತೆ ವರ್ಣಿಸಿ, “ನಾನು ಎಷ್ಟು ಹುಶಾರಿ, ನೋಡಿದಿರಾ? ನಿಮಗೆ ಹೀಗೆ ಮಾಡಲು ಬರುತ್ತದೆಯೇ?'' ಎಂದು ಕೆಣಕುತ್ತಿದ್ದ. ನನಗಂತೂ ಕೇಶಪ್ಪಚ್ಚಿ ತುಂಬ ಬುದ್ಧಿವಂತನೆಂದು ಮನವರಿಕೆಯಾಯಿತು. ಯಾವುದೇ ರೀತಿಯಲ್ಲಾಗಲಿ, ಅವನು ಎಂಟಾಣೆ ಉಳಿಸಿದ್ದು ನಿಜವೇ.

ಅಜ್ಜ ಕೇಶಪ್ಪಚ್ಚಿಯ ಕುರಿತು ಕಾಳಜಿ ವಹಿಸಿ ಪ್ರಶ್ನೆ ಕೇಳುತ್ತಿದ್ದರೋ ಅಥವಾ ಏನೂ ತಿಳಿಯದವನೆಂಬ ಭಾವನೆಯಿಂದ ಅವನನ್ನು ಎಚ್ಚರಿಸಲು ಮಾತನಾಡುತ್ತಿದ್ದರೋ – ತಿಳಿಯದು. ಅವನನ್ನು ಹಿಂದಿನಿಂದ ಅವರು ಯಾವತ್ತೂ ಕೇಶಮಳ್ಳ ಎಂದೇ ಹೇಳುತ್ತಿದ್ದರು – ಅದೇ ಅವನ ಹೆಸರು ಎಂಬಂತೆ. ಮುಂದಿನಿಂದ ಮಾತ್ರ, ‘‘ಕೇಶಾ, ಸ್ನಾನವಾಯಿತೆ?'' ‘‘ಕೇಶಾ, ಸಂಧ್ಯಾವಂದನೆ ಮಾಡಿದೆಯಾ?'' ‘‘ಊರಲ್ಲಿ ದಿನಾಲೂ ಪೂಜೆಗೆ